ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/47/2015-16 ದಿನಾಂಕ: ೩೮.07.2013

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

<u>ವಾದಿ (ಶ್ರೀ/ಶ್ರೀಮತಿ)</u>
ಕಣವಿಹಳ್ಳಿ ಈರಪ್ಪ ತಂದೆ ದೊಡ್ಡ ಹನುಮಂತಪ್ಪ ವಾಸ ಕೃಷ್ಣಾಪುರ ಗ್ರಾಮ ಹಗರಿ ಬೊಮ್ಮನಹಳ್ಳಿ ತಾಲೂಕು
[ಶ್ರೀ ಬಿ.ಬಸಪ್ಪ ವಕೀಲರು ಹಬೊ ಹಳ್ಳಿ]

<u>ಪ್ರತಿವಾದಿ (ಶ್ರೀ/ಶ್ರೀಮತಿ)</u>
ಜೆ ಕರಿಬಸವನಗೌಡ ತಂದೆ ಪಕ್ಕೀರಪ್ಪ ಗುಡ್ಡದ ವಾಸ ರಾಮನಗರ, ಹಗರಿ ಬೊಮ್ಮನಹಳ್ಳಿ ತಾಲೂಕು
[ಶ್ರೀ ಶಿವಯೋಗಿ ಬಿ.ವಿ. ವಕೀಲರು ಹಬೊ ಹಳ್ಳಿ]

<u>ವ್ಯಾಜ್ಯದ ಜಮೀನಿನ ವಿವರ</u>

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಬಸರಕೋಡು | 49/ಸಿ/2 | 4.51 ಎಕರೆ |

*****

<u>ಪೀಠಿಕೆ:</u>

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡು ಗ್ರಾಮದ ಸ.ನಂ.49/ಸಿ/2 ವಿಸ್ತೀರ್ಣ 4.51 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.51/2015-16, ರಲ್ಲಿ ಜೆ ಫಾರಂ ಭೂಮಿ ಕೇಂದ್ರಕ್ಕೆ ಸ್ವೀಕೃತವಾಗಿದ್ದು ಸದರಿ ಹಕ್ಕುಬದಲಾಣೆಗೆ ಪ್ರತಿವಾದಿಗಳಿಂದ ತಕರಾರು ಬಂದಿರುವ ಕಾರಣ ಈ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:31.03.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪರವಾಗಿ ಶ್ರೀ ಬಿ.ಬಸಪ್ಪ ವಕೀಲರು ಹಬೊ ಹಳ್ಳಿ ಇವರು ವಕಲಾತ್ತುನಾಮೆ ಸಲ್ಲಿಸಿ ವಾದ ಮಂಡಿಸಿರುತ್ತಾರೆ ಸದರಿಯವರ ಪ್ರಕಾರ ನೊಂದಣಿ ದಸ್ತಾವೇಜು ಸಂಖ್ಯೆ 3629/2015-16, ದಿನಾಂಕ:18.01.2016 ರ ಮೇರೆಗೆ ವಾದಿಗಳಾದ ಶ್ರೀ ಕಣವಿಹಳ್ಳಿ ಈರಪ್ಪ ತಂದೆ ದೊಡ್ಡ ಹನುಮಂತಪ್ಪ ಇವರಿಗೆ ಡಂಬ್ರಹಳ್ಳಿ ಮಹೇಶ್ ತಂದೆ ಡಂಬ್ರಹಳ್ಳಿ ನಿಂಗನಗೌಡ ಇವರು ಕ್ರಯಕ್ಕೆ ನೀಡಿದ್ದು ಸದರಿ ಕ್ರಯ ನೊಂದಣಿ ದಸ್ತಾವೇಜು ಮೇರೆಗೆ ವ್ಯಾಜ್ಯದ ಜಮೀನನ್ನು ಕ್ರಯದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರತಿವಾದಿಗಳು ಪ್ರಸ್ತುತ ಹಕ್ಕುಬದಲಾವಣೆಗೆ ದಿನಾಂಕ: 03.02.2016 ರಂದು ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ ಸದರಿಯವರ ಪರವಾಗಿ ಶ್ರೀ ಶಿವಯೋಗಿ ಬಿ.ವಿ. ವಕೀಲರು ಹಬೊ ಹಳ್ಳಿ ಇವರು ವಕಾಲತ್ತುನಾಮೆ ಸಲ್ಲಿಸಿ ವಾದ ಮಂಡಿಸಿರುತ್ತಾರೆ, ಸದರಿಯವರ ಪ್ರಕಾರ ವ್ಯಾಜ್ಯದ ಜಮೀನನ್ನು ದಿನಾಂಕ:07.07.1969 ರಂದು ಕೃಷ್ಣಾಪುರ ಗ್ರಾಮದ ಕಣವಿಹಳ್ಳಿ ವೀರಪ್ಪನ ಮಗ ಹನುಮಂತಪ್ಪ-1, ಹನುಮಂತಪ್ಪ-2 ಇವರಿಂದ ಅರಳಹಳ್ಳಿ ಹನುಮಂತಪ್ಪ ಫರಂ ಮೇನಜಿಂಗ್ ಪಾರ್ಟನರ್ ಜೆ.ನೀಲಪ್ಪನ ಮಗ ಪಕ್ಕೀರಪ್ಪ ಇವರು ಕ್ರಯಕ್ಕೆ ಪಡೆದಿದ್ದು ವ್ಯಾಜ್ಯದ ಜಮೀನು ಹಾಲಿ ಪ್ರತಿವಾದಿಗಳು ತನ್ನ

-ಸ್ವಾದೀನಾನುಭವದಲ್ಲಿರುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರತಿವಾದಿಗಳ ಗಮನಕ್ಕೆ ತರದೇ ಶಾರದಮ್ಮ, ದೇವಪ್ಪ ಹೇಮಣ್ಣ ಇವರು ಖಾತೆ ಬದಲಾವಣೆ ಮಾಡಿಕೊಂಡಿರುವುದಾಗಿ ತಿಳಿದುಬಂದಿರುವ ಪ್ರಯುಕ್ತ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಸದೀಶರು ಮತ್ತು ಜೆಎಂಎಫ್‌ಸಿ ಹಗರಿಬೊಮ್ಮನಹಳ್ಳಿ ರಲ್ಲಿ ಅಸಲು ದಾವಾ ಸಂಖ್ಯೆ 47/2009 ರಲ್ಲಿ ದಾವೆ ಹೂಡಿದ್ದು ಆಸ್ತಿಯ ಮೌಲ್ಯ ಹೆಚ್ಚಾಗಿದ್ದರಿಂದ ಮುಂದಿನ ನ್ಯಾಯಾಲಯಕ್ಕೆ ಹೋಗಲು ಆದೇಶ ನೀಡಿರುತ್ತಾರೆ, ಪ್ರಸ್ತುತ ಸಂದರ್ಭವನ್ನು ಬಳಸಿಕೊಂಡು ಡಂಬ್ರಹಳ್ಳಿ ಮಹೇಶ ತಂದೆ ನಿಂಗನಗೌಡ ಹಾಗೂ ಇತರರು ಸುಳ್ಳು ಖರೀದಿ ಪತ್ರವನ್ನು ಮಾಡಿಕೊಂಡಿರುತ್ತಾರೆ ಸದರಿ ಕ್ರಯವು ಕಾನೂನುಬಾಹೀರವಾಗಿದ್ದು ಸದರಿ ಕ್ರಯಪತ್ರದ ಪ್ರಕಾರ ಖಾತೆ ಬದಲಾವಣೆಯನ್ನು ಮಾಡದಂತೆ ಕೋರಿರುತ್ತಾರೆ.

ವಾದಿ ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ಪ್ರಸ್ತುತ ವ್ಯಾಜ್ಯದ ಜಮೀನಿನ ಹಾಲೀ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಡಂಬ್ರಹಳ್ಳಿ ಮಹೇಶ್ ತಂದೆ ಡಂಬ್ರಹಳ್ಳಿ ನಿಂಗನಗೌಡ ಇವರು ಪಟ್ಟಾದಾರರಾಗಿರುವುದು ಕಂಡುಬಂದಿರುತ್ತದೆ.
2. ನೊಂದಣಿ ದಸ್ತಾವೇಜು ಸಂಖ್ಯೆ 3629/2015-16, ದಿನಾಂಕ:18.01.2016ರ ಪ್ರತಿಯನ್ನು ಪರಿಶೀಲಿಸಲಾಗಿ ಶ್ರೀ ಕಣವಿಹಳ್ಳಿ ಈರಪ್ಪ ತಂದೆ ದೊಡ್ಡ ಹನುಮಂತಪ್ಪ ಇವರಿಗೆ ಡಂಬ್ರಹಳ್ಳಿ ಮಹೇಶ್ ತಂದೆ ಡಂಬ್ರಹಳ್ಳಿ ನಿಂಗನಗೌಡ ಇವರು ಕ್ರಯಕ್ಕೆ ನೀಡಿರುವುದಾಗಿ ಕಂಡುಬಂದಿರುತ್ತದೆ.
3. ಈ ಕಾರ್ಯಾಲಯದ ಪ್ರಕರಣ ಸಂಖ್ಯೆ ಕಂ.ಪಹಣಿ.ವಿವಾದ.17/2007-08ವನ್ನು ಪರಿಶೀಲಿಸಲಾಗಿ ಸದರಿ ಪ್ರಕರಣದಲ್ಲಿನ ವಾದಿಗಳಾದ ಅರಳಿಹಳ್ಳಿ ಕರಿಬಸವನಗೌಡ ತಂದೆ ಪಕ್ಕೀರಪ್ಪ ರಾಮನಗರ ಇವರು ಕ್ರಯ ಪತ್ರದ ಮೇರೆಗೆ ಖಾತೆ ಬದಲಾವಣೆಗೆ ಮನವಿಯನ್ನು ಸಲ್ಲಿಸಿದ್ದು ಸದರಿ ಖಾತೆ ಬದಲಾವಣೆಗೆ ಹನುಮಂತಪ್ಪ, ಹೇಮಣ್ಣ, ದೇವಪ್ಪ , ಲಕ್ಷ್ಮಮ್ಮ ಕೃಷ್ಣಾಪುರ ಗ್ರಾಮ ಇವರು ತಕರಾರು ಸಲ್ಲಿಸಿರುವ ಮೇರೆಗೆ ಸೂಕ್ತ ವಿಚಾರಣೆಯನ್ನು ದಿನಾಂಕ:27.11.2007 ರಂದು ಉಭಯ ಪಕ್ಷಕಾರರು ಮೇಲ್ದರ್ಜೆ ನ್ಯಾಯಾಲಯದಲ್ಲಿ ನ್ಯಾಯ ದೊರಕಿಸಿಕೊಳ್ಳುವಂತೆ ಆದೇಶ ನೀಡಲಾಗಿರುತ್ತದೆ.
4. 1968-69 ನೇ ಸಾಲಿನಿಂದ ಕೈಬರಹ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ ಈರಪ್ಪನರ ಹನುಮಂತಪ್ಪ ತಂದೆ ಈರಪ್ಪ ಕೃಷ್ಣಾಪುರ ಎಂದು ಪಟ್ಟಾದಾರರ ಹೆಸರು ನಮೂದು ಇದ್ದು ಸದರಿ ನಮೂದು 1999-2000 ನೇ ಸಾಲಿನವರೆಗೂ ಮುಂದುವರೆದಿರುತ್ತದೆ.
5. ಹಕ್ಕು ಬದಲಾವಣೆ ಆದೇಶ ಸಂಖ್ಯೆ ಎಂ.ಆರ್.18/2006-07 ದಿನಾಂಕ:20.10.2006 ರ ಮೇರೆಗೆ ಈರಪ್ಪನರ ಹನುಮಂತಪ್ಪ ತಂದೆ ಈರಪ್ಪ ಇವರಿಂದ ಪೋತಿ ವಾರಸತ್ವದ ಪ್ರಕಾರ 1. ಹನುಮಂತಪ್ಪ ತಂದೆ ಲೇಟ್ ಹನುಮಂತಪ್ಪ 2. ಈರಪ್ಪ ತಂದೆ ಲೇಟ್ ಹನುಮಂತಪ್ಪ ಹಾಗೂ 3. ಲಕ್ಷ್ಮವ್ವ ಇವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ.
6. ನೊಂದಣಿ ದಸ್ತಾವೇಜು ಸಂಖ್ಯೆ 1732/2008-09 ದಿನಾಂಕ:03.11.2008 ರ ಪ್ರತಿಯನ್ನು ಪರಿಶೀಲಿಸಲಾಗಿ 1. ಹನುಮಂತಪ್ಪ ತಂದೆ ಲೇಟ್ ಹನುಮಂತಪ್ಪ 2. ಈರಪ್ಪ ತಂದೆ ಲೇಟ್ ಹನುಮಂತಪ್ಪ ಹಾಗೂ 3. ಲಕ್ಷ್ಮವ್ವ ಇವರುಗಳು ಡಂಬ್ರಹಳ್ಳಿ ಮಹೇಶ ತಂದೆ ಡಂಬ್ರಹಳ್ಳಿ ನಿಂಗನಗೌಡ ಇವರಿಗೆ ಕ್ರಯಕ್ಕೆ ನೀಡಿರುವುದಾಗಿ ಕಂಡುಬಂದಿರುತ್ತದೆ.
7. ಋಣಭಾರ ಪ್ರಮಾಣಪತ್ರ ಹಾಗೂ ನೊಂದಣಿ ದಸ್ತಾವೇಜು ಸಂಖ್ಯೆ 1421 ದಿನಾಂಕ:07.07.1969 ರ ಪ್ರತಿಗಳನ್ನು ಪರಿಶೀಲಿಸಲಾಗಿ ಕೃಷ್ಣಾಪುರ ಗ್ರಾಮದ ಕಣವಿಹಳ್ಳಿ ವೀರಪ್ಪನ ಮಗ ಹನುಮಂತಪ್ಪ-1, ಹನುಮಂತಪ್ಪ-2 ಇವರಿಂದ ಅರಳಹಳ್ಳಿ ಹನುಮಂತಪ್ಪ ಫರಂ ಮೇನಜಿಂಗ್ ಪಾರ್ಟನರ್ ಜೆ.ನೀಲಪ್ಪನ ಮಗ ಪಕ್ಕೀರಪ್ಪ ಇವರು ಕ್ರಯಕ್ಕೆ ಪಡೆದಿರುವುದಾಗಿ ತಿಳಿದುಬಂದಿರುತ್ತದೆ.

ಎ.ವಿಲೇ.ನಂ.ಕಂ.ಪಹಣಿ.ವಿವಾದ/47/2015-16

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರಸ್ತುತ ವ್ಯಾಜ್ಯದ ಜಮೀನು ದಿನಾಂಕ:07.07.1969 ನೇ ಸಾಲಿನಲ್ಲಿ ಕ್ರಯ ವ್ಯವಹಾರ ನಡೆದಿದ್ದು ಸದರಿ ಕ್ರಯದ ಮೇರೆಗೆ ಪಹಣಿ ದಾಖಲೆಯಲ್ಲಿ ಯಾವುದೇ ತರಹದ ಖಾತೆ ಬದಲಾವಣೆಯಾಗದೇ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ತದನಂತರ ಸತತವಾಗಿ ಕ್ರಯವ್ಯವಹಾರ ನಡೆದಿದ್ದು ಖಾತೆ ಬದಲಾವಣೆಗಳಾಗಿರುತ್ತವೆ ತದನಂತರ ನಡೆದ ಕ್ರಯ ನೊಂದಣಿಗಳ ನೈಜತೆಯನ್ನು ಹಾಗೂ ಈಗಾಗಲೇ ನಡೆದ ಹಕ್ಕುಬದಲಾವಣೆಯ ನೈಜತೆಯನ್ನು ತೀರ್ಮಾನಿಸುವುದು ಈ ನ್ಯಾಯಾಲಯದ ವ್ಯಾಪ್ತಿಗೆ ಇಲ್ಲವಾದ್ದರಿಂದ ಸದರಿ ಪ್ರಕರಣವು ಸಂಪೂರ್ಣ ಸಿವಿಲ್ ಸ್ವರೂಪದ್ದಾಗಿರುವುದರಿಂದ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸಬಹುದಾಗಿರುವುದರಿಂದ ಈ ಕೆಳಗಿನಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಬಸರಕೋಡು ಗ್ರಾಮದ ಸ.ನಂ.49/ಸಿ/2 ವಿಸ್ತೀರ್ಣ 4.51 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ತಂಬ್ರಹಳ್ಳಿ Office of the Deputy Tahasildar

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ, ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.